ರಿಜಿಡ್ ಪಿ.ವಿ.ಸಿ.
ಶ್ರೀಕೃಷ್ಣ ಪೈಪ್ಸ್
Ph: (08254) 271261, 271361 (R), 264361, 264444 (Factory)

ಉದಯವಾಣಿ
ಜನಮನದ ಜೀವನಾಡಿ
ಮಣಿಪಾಲ । ಬೆಂಗಳೂರು । ಹುಬ್ಬಳ್ಳಿ । ಕಲಬುರಗಿ । ದಾವಣಗೆರೆ । ಮುಂಬಯಿ
Regd.No.UDP/1259/2018-20 | udayavani.com | UDAYAVANI – KANNADA DAILY – MANIPAL ಮಣಿಪಾಲ, ಗುರುವಾರ, ಜೂನ್ 28, 2018 ಬೆಲೆ: ₹ 5-00 ವಿದೇಶ ಬೆಲೆ: ₹ 6-00

CENTRAL LIBRARY

PETROL PUMP
PHOTO COPIER
DENTAL CHAIR
AC
DIGITRON
Ph: 9844281977

# ಯುಜಿಸಿಗೆ ಗುಡ್‌ಬೈ ?


## ಭಾರತ ಉನ್ನತ ಶಿಕ್ಷಣ ಆಯೋಗ ಜಾರಿಗೆ ತರಲು ಕೇಂದ್ರದ ಚಿಂತನೆ

**ಹೊಸದಿಲ್ಲಿ, ಜೂ. 27: ದೇಶದಲ್ಲಿ ಉನ್ನತ ಶಿಕ್ಷಣವನ್ನು ನಿಯಂತ್ರಿಸುತ್ತಿರುವ ವಿಶ್ವವಿದ್ಯಾಲಯಗಳ ಧನ ಸಹಾಯ ಆಯೋಗ (ಯುಜಿಸಿ)ಕ್ಕೆ ಗುಡ್‌ಬೈ ಹೇಳಲು ಕೇಂದ್ರ ಸರಕಾರ ತಯಾರಿ ನಡೆಸುತ್ತಿದೆ. ಇದಕ್ಕೆ ಬದಲಾಗಿ ಭಾರತ ಉನ್ನತ ಶಿಕ್ಷಣ ಆಯೋಗವನ್ನು ತರಲು ಚಿಂತನೆ ನಡೆಸುತ್ತಿದೆ.**

ಈ ಸಂಬಂಧ ಕೇಂದ್ರ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವ ಪ್ರಕಾಶ್ ಜಾವ್ಡೇಕರ್ ಟ್ವೀಟ್ ಮಾಡುವ ಮೂಲಕ ಇಂಥದ್ದೊಂದು ಸಾಧ್ಯತೆಯನ್ನು ಪ್ರಕಟಿಸಿದ್ದಾರೆ. ಭಾರತದ ಉನ್ನತ ಶಿಕ್ಷಣ ಆಯೋಗ (ಎಚ್‌ಇಸಿಐ) ವಿವಿಗಳಲ್ಲಿರುವ ಶೈಕ್ಷಣಿಕ ಮಾನದಂಡಗಳ ಸುಧಾರಣೆ ಮತ್ತು ನಿರ್ವಹಣೆ ಬಗ್ಗೆ ಮಾತ್ರವೇ ಕೆಲಸ ಮಾಡಲಿದೆ. ಆದರೆ ವಿವಿಗಳಿಗೆ ಅನುದಾನ ನೀಡಿಕೆಯ ಅಧಿಕಾರವನ್ನು ಮಾನವ ಸಂಪದ ಅಭಿವೃದ್ಧಿ ಸಚಿವಾಲಯ ತನ್ನಲ್ಲಿಯೇ ಇರಿಸಿಕೊಳ್ಳಲಿದೆ. ಐಐಟಿ, ಎನ್‌ಐಟಿ ಮತ್ತು ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಎಜುಕೇಶನ್ ಆ್ಯಂಡ್ ರಿಸರ್ಚ್ (ಐಐಎಸ್‌ಇಆರ್)ಗಳಿಗೆ ಅನುದಾನ ಬಿಡುಗಡೆ ಮಾಡುವಂತೆಯೇ ನೆರವು ನೀಡಲಿದೆ.

ಪ್ರಸ್ತಾವಿತ ಕರಡು ಕಾಯ್ದೆಯನ್ನು ಜು.18ರಂದು ಆರಂಭವಾಗುವ ಸಂಸತ್‌ನ ಮುಂಗಾರು ಅಧಿವೇಶನದಲ್ಲಿ ಮಂಡಿಸಿ ಅನುಮೋದನೆ ಪಡೆಯಲು ಸರಕಾರ ಉದ್ದೇಶಿಸಿದೆ. ವಿವರಗಳನ್ನು ಯುಜಿಸಿ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ. ಶಿಕ್ಷಣ ತಜ್ಞರು, ಸಾರ್ವಜನಿಕರು ಜು.7ರ ಒಳಗಾಗಿ ತಮ್ಮ ಅಭಿಪ್ರಾಯ, ಆಕ್ಷೇಪಗಳನ್ನು ಸಲ್ಲಿಸಲೂ ಅದು ಕೋರಿದೆ.

ಗುರುವಾರ, 28 ಜೂನ್ 2018 | ಪುಟಗಳು: 10+4+2 | ಬೆಲೆ: ₹ 5.00
ಮಂಗಳೂರು | ಬೆಂಗಳೂರು | ಮೈಸೂರು | ಶಿವಮೊಗ್ಗ | ಹುಬ್ಬಳ್ಳಿ | ಬಾಗಲಕೋಟ | ಕಲಬುರಗಿ
www.vijaykarnataka.com
ಸಂಪುಟ: 17 | ಸಂಚಿಕೆ: 333
VK
ವಿಜಯ ಕರ್ನಾಟಕ



ಕಾಂಗ್ರೆಸ್‌ಗೆ ಪಕೋಡಾ ಮಾತ್ರ ಕಾಣುತ್ತೆ, 4 ಕೋಟಿ ಉದ್ಯೋಗ ಸೃಷ್ಟಿ ಕಾಣಲ್ಲ: ಗಿರಿರಾಜ್ ಸಿಂಗ್ P08



ನೀರವ್ ಮೋದಿಯನ್ನು ಹುಡುಕಲು ನೆರವು ಕೊಡಿ: ಬ್ರಿಟನ್, ಫ್ರಾನ್ಸ್, ಬೆಲ್ಜಿಯಂಗೆ ಭಾರತ ಮನವಿ P07

ಭಾರತದ ಸೈನಿಕರ ಮಾನವೀಯತೆ ಜಗತ್ತಿಗೆ ಗೊತ್ತು, ವಿಶ್ವಸಂಸ್ಥೆಗೆ ಗೊತ್ತಿಲ್ವಾ?: ರಾವತ್

# ಯುಜಿಸಿ ರದ್ದು ಸನ್ನಿಹಿತ; ಹೊಸ ಶಿಕ್ಷಣ ಆಯೋಗ ಶೀಘ್ರ

**ಹೊಸದಿಲ್ಲಿ:** ವಿಶ್ವವಿದ್ಯಾಲಯ ಅನುದಾನ ಆಯೋಗ (ಯುಜಿಸಿ) ರದ್ದುಗೊಳಿಸಿ, ಅದರ ಸ್ಥಾನದಲ್ಲಿ 'ಉನ್ನತ ಶಿಕ್ಷಣ ಆಯೋಗ' ರಚಿಸಲು ಮುಂದಾಗಿರುವ ಕೇಂದ್ರ ಸರಕಾರ, ಈ ಸಂಬಂಧ ಶಿಕ್ಷಣ ತಜ್ಞರು ಹಾಗೂ ಸಾರ್ವಜನಿಕರಿಂದ ಸಲಹೆಗಳನ್ನು ಕೋರಿದೆ.

ಭಾರತದಲ್ಲಿ ವಿಶ್ವವಿದ್ಯಾಲಯಗಳ ಸಮನ್ವಯತೆ ಮತ್ತು ಶಿಕ್ಷಣದ ಗುಣಮಟ್ಟ ಸುಧಾರಣೆಗಾಗಿ ಕೇಂದ್ರ ಮಾನವ ಸಂಪನ್ಮೂಲ ಸಚಿವಾಲಯ ಯುಜಿಸಿ ಕಾಯಿದೆಗೆ ತಿದ್ದುಪಡಿ ತರಲು ಮುಂದಾಗಿದ್ದು, 'ಉನ್ನತ ಶಿಕ್ಷಣ ಆಯೋಗ ಕಾಯಿದೆ-2018' ಎಂಬ ಹೊಸ ವಿಧೇಯಕದ ಕರಡು ಪ್ರತಿಯನ್ನು ಸಿದ್ಧಪಡಿಸಿದೆ.




ಶಿಕ್ಷಣದ ಗುಣಮಟ್ಟದ ಮಾನದಂಡಗಳನ್ನು ಜಾರಿಗೊಳಿಸುವ ಮತ್ತು ಗುಣಮಟ್ಟ ಕಾಯ್ದುಕೊಳ್ಳದ ಹಾಗೂ ನಕಲಿ ಸಂಸ್ಥೆಗಳನ್ನು ಬಂದ್ ಮಾಡುವ ಅಧಿಕಾರವನ್ನು ಉನ್ನತ ಶಿಕ್ಷಣ ಆಯೋಗಕ್ಕೆ ನೀಡಲಾಗಿದೆ.

ಸಂಸತ್ ಮುಂಗಾರು ಅಧಿವೇಶನದಲ್ಲಿ ಈ ವಿಧೇಯಕ ಮಂಡನೆಯಾಗುವ ಸಾಧ್ಯತೆ ಇದೆ.

ಜು. 7ರ ಸಂಜೆ 5 ಗಂಟೆಯೊಳಗೆ ಸಲಹೆ ಮತ್ತು ಸೂಚನೆಗಳನ್ನು
reformofugc@gmail.com
ಇ-ಮೇಲ್ ವಿಳಾಸಕ್ಕೆ ಕಳುಹಿಸಬೇಕೆಂದು ಎಲ್ಲ ಶಿಕ್ಷಣ ತಜ್ಞರಲ್ಲಿ ಮನವಿ ಮಾಡುತ್ತೇನೆ.

**-ಪ್ರಕಾಶ್ ಜಾವಡೇಕರ್**
ಕೇಂದ್ರ ಮಾನವ ಸಂಪನ್ಮೂಲ ಸಚಿವ

## ಹಣಕಾಸು ಅಧಿಕಾರಕ್ಕೆ ಕೊಕ್ಕೆ

ಉದ್ದೇಶಿತ 'ಉನ್ನತ ಶಿಕ್ಷಣ ಆಯೋಗ'ವು 'ಯುಜಿಸಿ' ಮಾದರಿಯಲ್ಲಿ ವಿಶ್ವವಿದ್ಯಾಲಯಗಳ ಹಣಕಾಸಿನ ಮೇಲೆ ಯಾವುದೇ ಅಧಿಕಾರ ಹೊಂದಿರುವುದಿಲ್ಲ. ಕೇವಲ ವಿವಿಗಳಲ್ಲಿ ಶೈಕ್ಷಣಿಕ ಮಾನದಂಡ ರೂಪಿಸುವ, ಕಾಯ್ದುಕೊಳ್ಳುವ ಮತ್ತು ಸುಧಾರಿಸುವ ಕೆಲಸವನ್ನಷ್ಟೇ ಈ ಆಯೋಗದ ವ್ಯಾಪ್ತಿಗೆ ಸೇರಿಸಲಾಗಿದೆ. ಕೇಂದ್ರ ಮಾನವ ಸಂಪನ್ಮೂಲ ಸಚಿವಾಲಯವೇ ನೇರವಾಗಿ ವಿವಿಗಳ ಹಣಕಾಸು ನಿರ್ವಹಣೆ ಮಾಡುವ ಸಾಧ್ಯತೆಯಿದೆ.

ಮುಂಜಾನೆ ಮಾತು
ನಾವು ಆತಂಕದಲ್ಲಿದ್ದೇವೆಂದರೆ ನಿನ್ನೆ ಅಥವಾ ನಾಳೆಗಳಲ್ಲೇ ಇದ್ದೇವೆ ಅಂತಾಯ್ತು. ಇಂದಿನ ಕ್ಷಣಗಳ ಸದ್ಬಳಕೆಯಲ್ಲಿ ಮಾತ್ರ ನೆಮ್ಮದಿ ಲಭ್ಯ ಎಂಬ ಅರಿವಿನೊಂದಿಗೆ ಸಾಗೋಣ.

ವಿಜಯವಾಣಿ
ಕನ್ನಡಿಗರ ಧ್ವನಿ
ನಂ.1* ಕನ್ನಡ ದಿನಪತ್ರಿಕೆ



ಬೆಂಗಳೂರು ಮಂಗಳೂರು ಹುಬ್ಬಳ್ಳಿ ವಿಜಯಪುರ ಮೈಸೂರು ಗಂಗಾವತಿ ಚಿತ್ರದುರ್ಗ ಶಿವಮೊಗ್ಗ ಕಲಬುರಗಿ ಬೆಳಗಾವಿ VIJAYAVANI ● MANGALURU ಮಂಗಳೂರು ● ಸಂಪುಟ 7 ● ಸಂಚಿಕೆ 89
vijayavani.net ಇ-ಪೇಪರ್: epapervijayavani.in VVani4U @VVANI4U vijayavaninews@gmail.com ಸಹಾಯವಾಣಿ: 8884411682 28 ಜೂನ್ 2018 | ಗುರುವಾರ

CENTRAL LIBRARY

# ಯುಜಿಸಿಗೆ ತಿಲಾಂಜಲಿ

## ಎಚ್‌ಇಸಿಐ ರಚನೆಗೆ ಕೇಂದ್ರ ಸರ್ಕಾರ ತೀರ್ಮಾನ

**ನವದೆಹಲಿ:** ಕೇಂದ್ರ ಸರ್ಕಾರ ಆರು ದಶಕಗಳ ಹಿಂದಿನ ವಿಶ್ವವಿದ್ಯಾಲಯ ಅನುದಾನ ಆಯೋಗ (ಯುಜಿಸಿ)ವನ್ನು ರದ್ದುಗೊಳಿಸಿ ಉನ್ನತ ಶಿಕ್ಷಣ ಆಯೋಗ (ಎಚ್‌ಇಸಿಐ) ರಚಿಸಲು ಮುಂದಾಗಿದೆ.

**» ಕರಡು ಕಾಯ್ದೆ ಪ್ರತಿ ಬಿಡುಗಡೆ ಮಾಡಿದ ಎಂಎಚ್‌ಆರ್‌ಡಿ**

ಮಳೆಗಾಲದ ಅಧಿವೇಶನದಲ್ಲಿ ಹೊಸ ಕಾಯ್ದೆ ಮಂಡನೆಯಾಗಲಿದ್ದು, ಪೂರ್ವಭಾವಿಯಾಗಿ ಕೇಂದ್ರ ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆ ವೆಬ್‌ಸೈಟ್‌ನಲ್ಲಿ ನೂತನ ಆಯೋಗಕ್ಕೆ ಸಂಬಂಧಿಸಿದ ಕಾಯ್ದೆಯ ಕರಡು ಪ್ರತಿ ಅಪ್‌ಲೋಡ್ ಮಾಡಲಾಗಿದೆ. ಆಕ್ಷೇಪಣೆ ಹಾಗೂ ಸಲಹೆ ಸಲ್ಲಿಸಲು ಜು.7ರವರೆಗೆ ಅವಕಾಶ ನೀಡಲಾಗಿದೆ.

ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಹೆಚ್ಚಿನ ಶೈಕ್ಷಣಿಕ ಸ್ವಾಯತ್ತತೆ ನೀಡಲು ಹಾಗೂ ಸಂಶೋಧನಾ ಪ್ರವೃತ್ತಿ ವೃದ್ಧಿಸುವ ಉದ್ದೇಶದಿಂದ ಭಾರತೀಯ ಉನ್ನತ ಶಿಕ್ಷಣ ಆಯೋಗ ರಚನೆಗೆ ಸರ್ಕಾರ ನಿರ್ಧರಿಸಿದೆ. ಯಶ್ ಪಾಲ್ ಹಾಗೂ ಹರಿ ಗೌತಮ್ ಸಮಿತಿ ವರದಿ ಪ್ರಕಾರ ಯುಜಿಸಿ ರದ್ದುಪಡಿಸಿ ಹೊಸ ಆಯೋಗ ರಚನೆಗೆ ಕೇಂದ್ರ ಸರ್ಕಾರ ನಿರ್ಧರಿಸಿದೆ. ಸಮಿತಿ ಶಿಫಾರಸಿನಂತೆ ಆಯೋಗದಿಂದ ಅನುದಾನ ಹಂಚಿಕೆಯ ಜವಾಬ್ದಾರಿ ಕಿತ್ತುಕೊಳ್ಳಲಾಗಿದೆ. ಆದರೆ ಸಂಪೂರ್ಣ ಉನ್ನತ ಶಿಕ್ಷಣಕ್ಕೆ ಏಕರೂಪ ಆಯೋಗ ರಚಿಸಲು ಕೇಂದ್ರ ವಿಫಲವಾಗಿದೆ.

ಇಲಾಖೆ ವೆಬ್‌ಸೈಟ್‌ನಲ್ಲಿ ಲಭ್ಯವಿರುವ 14 ಪುಟಗಳ ಕರಡು ನಿಯಮ ಪ್ರಕಾರ ನೂತನ ಆಯೋಗವು ಅಧ್ಯಕ್ಷ, ಉಪಾಧ್ಯಕ್ಷ ಹಾಗೂ 12 ಸದಸ್ಯರನ್ನು ಹೊಂದಿರಲಿದೆ. ಕೇಂದ್ರ ಸರ್ಕಾರ ಶಿಕ್ಷಣ ತಜ್ಞರನ್ನು ಈ ಹುದ್ದೆಗೆ ಪರಿಗಣಿಸಲಿದ್ದು, ದೇಶದ ಎಲ್ಲ ಉನ್ನತ ಶಿಕ್ಷಣ ಸಂಸ್ಥೆಗಳ ಗುಣಮಟ್ಟ ಏರಿಕೆ ಬಗ್ಗೆ ಮಾತ್ರ ಇನ್ನು ತಲೆಕೆಡಿಸಿಕೊಳ್ಳಲಿದೆ.

**ಎಐಸಿಟಿಇಗೂ ಹೊಸ ರೂಪ?:** ತಾಂತ್ರಿಕ ಶಿಕ್ಷಣ ಆಯೋಗವನ್ನು ಕೂಡ ಉನ್ನತ ಶಿಕ್ಷಣ ಆಯೋಗದ ವ್ಯಾಪ್ತಿಗೆ ಸೇರಿಸುವ ಚರ್ಚೆ ನಡೆದಿತ್ತು. ಆದರೆ ವಿರೋಧ ವ್ಯಕ್ತವಾದ ಕಾರಣ ತಾಂತ್ರಿಕ ಶಿಕ್ಷಣ ಆಯೋಗ ಸ್ವತಂತ್ರವಾಗಿ ಉಳಿಯಲಿದೆ. ಸಚಿವರ ಸಲಹೆ ಮೇರೆಗೆ ಉನ್ನತ ಶಿಕ್ಷಣ ಆಯೋಗ ರಚನೆಯಾದ ಬಳಿಕ ಎಐಸಿಟಿಇಗೂ ಕೂಡ ಹೊಸ ರೂಪ ಸಿಗಲಿದೆ.




### ಆಯೋಗದ ಜವಾಬ್ದಾರಿಗಳು

- ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಶೈಕ್ಷಣಿಕ ಸ್ವಾಯತ್ತತೆಗೆ ಅವಕಾಶ ನೀಡಿ, ಜಾಗತಿಕ ಸ್ಪರ್ಧೆಗೆ ಅನುವಾಗುವಂತೆ ಸಂಶೋಧನೆ ಒತ್ತು ನೀಡುವುದು
- ಕಲಿಕೆ, ಮೌಲ್ಯಮಾಪನ, ಸಂಶೋಧನೆ, ಕೌಶಲ ತರಬೇತಿ ಕುರಿತು ಮಾರ್ಗಸೂಚಿ
- ಶಿಕ್ಷಣ ಸಂಸ್ಥೆಗಳ ವಾರ್ಷಿಕ ಮೌಲ್ಯಮಾಪನ, ಅಕ್ರೆಡೇಷನ್ ವ್ಯವಸ್ಥೆ
- ಸರ್ಕಾರದೊಂದಿಗೆ ಚರ್ಚಿಸಿ ಸಂಶೋಧನೆಗೆ ಅನುದಾನ ದೊರಕಿಸುವುದು
- ಗುಣಮಟ್ಟ ಕಾಯ್ದುಕೊಳ್ಳಲು ವಿಫಲವಾದ ಶಿಕ್ಷಣ ಸಂಸ್ಥೆಗಳ ಮೇಲೆ ನಿಗಾ ಹಾಗೂ ನೋಂದಣಿ ರದ್ದು
- ಶಿಕ್ಷಣ ಸಂಸ್ಥೆ ಅಥವಾ ವಿವಿಗಳು ತಮ್ಮದೇ ಶೈಕ್ಷಣಿಕ ಪಠ್ಯಕ್ರಮ ರಚಿಸಿಕೊಳ್ಳಲು ಅವಕಾಶ
- ಶಿಕ್ಷಣ ಸಂಸ್ಥೆಗಳ ಸ್ವಾಯತ್ತತೆ ಕುರಿತು ನಿಯಮ ರಚನೆ
- ಸಿಬ್ಬಂದಿ ನೇಮಕಕ್ಕೆ ಅರ್ಹತೆ ನಿಗದಿ

### ಶುಲ್ಕದ ಬಗ್ಗೆ ನಿಗಾ!

ಇದೇ ಮೊದಲ ಬಾರಿಗೆ ಉನ್ನತ ಶಿಕ್ಷಣ ಸಂಸ್ಥೆಗಳ ಶುಲ್ಕ ನಿಗದಿಗೂ ಕೇಂದ್ರ ಸರ್ಕಾರ ಮುಂದಾಗಿದೆ. ಕರಡು ನಿಯಮದಲ್ಲಿ ಈ ವಿಚಾರ ಪ್ರಸ್ತಾಪವಾಗಿದ್ದು, ಕಡಿಮೆ ವೆಚ್ಚದಲ್ಲಿ ಉನ್ನತ ಶಿಕ್ಷಣ ಲಭ್ಯವಾಗಬೇಕು ಎನ್ನುವ ನಿಟ್ಟಿನಲ್ಲಿ ಹೊಸ ಪ್ರಸ್ತಾಪ ಸೇರಿಸಲಾಗಿದೆ. ಶುಲ್ಕ ನಿಗದಿಗೆ ಸಂಬಂಧಿಸಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಗೆ ಆಯೋಗವು ಶಿಫಾರಸು ಮಾಡಲಿದೆ. ಆಯಾ ಸರ್ಕಾರಗಳು ತಮ್ಮ ಅಧೀನದಲ್ಲಿನ ಶಿಕ್ಷಣ ಸಂಸ್ಥೆಗಳು ಈ ಪ್ರಕಾರ ಶುಲ್ಕ ನಿಗದಿಪಡಿಸುವಂತೆ ಕ್ರಮಕೈಗೊಳ್ಳಬೇಕಿದೆ.

### ಸರ್ಕಾರದಿಂದಲೇ ಅನುದಾನ ಹಂಚಿಕೆ

ಯುಜಿಸಿಯು ನ್ಯಾಕ್ ರ್‍ಯಾಂಕ್ ಆಧರಿಸಿ ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಅನುದಾನ ಹಂಚಿಕೆ ಮಾಡುತ್ತಿತ್ತು. ಆದರೆ ಈ ಪ್ರಕ್ರಿಯೆ ಬಗ್ಗೆ ಸಾಕಷ್ಟು ವಿರೋಧವ್ಯಕ್ತವಾಗಿದ್ದವು. ಹೀಗಾಗಿ ನೂತನ ಆಯೋಗದಿಂದ ಈ ಅಧಿಕಾರ ಕಿತ್ತುಕೊಂಡು, ಕೇಂದ್ರ ಸರ್ಕಾರವೇ ನೇರವಾಗಿ ಅನುದಾನ ಹಂಚಿಕೆ ಮಾಡಲಿದೆ. ವಿವಿ ಹಾಗೂ ಶಿಕ್ಷಣ ಸಂಸ್ಥೆಗಳ ಮೂಲ ಸೌಕರ್ಯ ಅಭಿವೃದ್ಧಿ ನಿಧಿಯನ್ನು ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆಯೇ ಹಂಚಿಕೆ ಮಾಡಲಿದೆ.

ಕರಡು ಪ್ರತಿ ಇರುವ ವೆಬ್‌ಸೈಟ್: http://mhrd.gov.in/sites/upload_files/mhrd/files/HE_Col_India_2018_act.pdf ಆಕ್ಷೇಪಣೆ, ಸಲಹೆಗೆ ಇ-ಮೇಲ್: reformofugc@gmail.com

BENNETT, COLEMAN & CO. LTD. | ESTABLISHED 1838 | TIMESOFINDIA.COM | EPAPER.TIMESOFINDIA.COM
MANGALURU | THURSDAY, JUNE 28, 2018 | PAGES 16 | PRICE ₹4.50

THE TIMES OF INDIA



DIEGO MARADONA SAYS HE'S FINE AFTER BEING SEEN BY DOCTOR DURING ARGENTINA'S MATCH 13

CENTRE WILL REPLACE UGC WITH HIGHER EDUCATION COMMISSION: JAVADEKAR 6



RIMA KALLINGAL, 3 OTHERS QU MALAYALAM MOVIE BODY FOR RE-INDUCTING ACTOR DILEEP 8

# VTU to spend ₹30cr on Foundation Day

Aparajita.Ray@timesgroup.com

**Bengaluru:** The Visvesvaraya Technical University (VTU) is all set to celebrate its 20th Foundation Day on Friday in Belagavi notwithstanding its financial crisis.

**FUND CRUNCH**

Going by its account books, the university ran a Rs 30-crore deficit last year with its expenditure touching Rs 250 crore as against receipts of Rs 220 crore.

VTU has earmarked Rs 1.15 crore and got approval from the financial committee but is yet to take ratification from its executive council.

> **The only silver lining for VTU is that it has been exempted from the income tax department from paying dues and interests to the tune of Rs 127 crore**

"The ratification will be obtained before Friday. We'll restrict the expenditure to Rs 55 lakh," vice-chancellor Karisiddappa said.

The varsity is honouring governor Vajubhai Vala, CM HD Kumaraswamy and higher education minister GT Devegowda and minister for municipalities and local bodies Ramesh Jarkiholi. Padma Vibhushan VK Atre, former secretary of DRDO and scientific advisor to defence minister, will deliver talks. An alumni meet will also be held. The only silver lining for VTU is that it has been exempted from the income tax department from paying dues and interests to the tune of Rs 127 crore. It will get Rs 441 crore from the corpus fund, which was seized during I-T raids six years ago.

**Model BE curriculum from 2018-19**

From this year, undergraduate engineering students in 220 affiliate colleges of VTU will follow a model curriculum. Starting from reducing credits from 200 to 175 for the four-year period to introducing a 'mini project' and virtual labs, the curriculum aims to make students industry ready.

"We're running day programmes in affiliate colleges as we don't know what students are engaged in after their classes, unlike in IITs and NITs which are residential and the learning happens throughout the day," the VC said.


VTU registrar HN Jagannath Reddy said reducing credits will ease the burden on the faculty and help accommodate open electives and other programmes within the course duration.

"Mini projects will be compulsory for students between IV and V semesters and it will be a three-credit programme. They will have to tie up with industry and make a report. The main project that they do between VII and VIII semesters can be multi-disciplinary," he added.

Students will also be tested on the 60-40 basis — where 60 marks will be for the semester programme and 40 for internal exams. Earlier it was a 80-20 model. Virtual labs will also be established in colleges, where students can practise some of the tests that they can attempt only once in physical laboratories.

BENNETT, COLEMAN & CO. LTD. | ESTABLISHED 1838 | TIMESOFINDIA.COM | EPAPER.TIMESOFINDIA.COM
MANGALURU | THURSDAY, JUNE 28, 2018 | PAGES 16 | PRICE ₹4.50

THE TIMES OF INDIA



DIEGO MARADONA SAYS HE'S FINE AFTER BEING SEEN BY DOCTOR DURING ARGENTINA'S MATCH 13

CENTRE WILL REPLACE UGC WITH HIGHER EDUCATION COMMISSION: JAVADEKAR 6



RIMA KALLINGAL, 3 OTHERS QU MALAYALAM MOVIE BODY FOR RE-INDUCTING ACTOR DILEEP 8

# Pvt engineering colleges likely to downsize faculty

Aparajita.Ray@timesgroup.com

Bengaluru: The All India Council for Technical Education (AICTE) directive allowing engineering colleges to have one teacher for every 20 students may prompt Karnataka's private institutions reporting poor admissions year on year, to downsize their faculty. AICTE norms had earlier specified a teacher-student ratio of 1:15.

While VTU has urged managements of private engineering colleges not to pinkslip their faculty, it admits it has no control over them whatsoever. "I would only urge teachers to be responsible and not panic. We have urged colleges not to remove teachers until they retire," says VTU vice-chancellor Karisiddappa.

> On an average, private engineering colleges in Karnataka reported only 68% admissions last year, while nationally, the figure was only 50%. We cannot do anything if the colleges remove faculty
> **— Varsity officials**

But varsity officials say colleges that have had admissions as low as 32% last year will certainly look at the new directive as a cost-cutting measure. "Many reputed private engineering colleges in the state saw admissions between 32% and 40%. For self-financed institutions where admissions are lower than 50%, having three or four extra teachers is a burden. We cannot do anything if the colleges remove faculty," they said.

M K Panduranga Setty, chairman of RV College of Engineering, said, "NAAC and NBA accreditation requires colleges to have a teacher-student ratio of 1:12. And we follow that. The problem occurred because many college managements, who neither have a good rate of admission nor the money to spend on faculty, have pressured AICTE and VTU in Karnataka to shut such colleges. Those colleges following higher standards of education and having accreditation cannot afford to lose both and reduce the number of faculty."

FOLLOW US:
thehindu.com
facebook.com/thehindu
twitter.com/the_hindu
THURSDAY, JUNE 28, 2018
THE HINDU
INDIA'S NATIONAL NEWSPAPER SINCE 1878
PRINTED AT · CHENNAI · COIMBATORE · BENGALURU · HYDERABAD · MADURAI · NOIDA · VISAKHAPATNAM · THIRUVANANTHAPURAM · KOCHI · VIJAYAWADA · MANGALURU · TIRUCHIRAPALLI · KOLKATA · HUBBALLI · MOHALI · MALAPPURAM · MUMBAI · TIR

# New body to replace UGC proposed

## Centre places draft Bill in public domain

SPECIAL CORRESPONDENT
NEW DELHI

Setting the ball rolling for major reforms in higher education, the Centre has placed in the public domain a draft Bill for a Higher Education Commission of India - aimed at replacing the University Grants Commission - for eliciting suggestions from educationists.

The draft Higher Education Commission of India (Repeal of University Grants Commission Act) Act, 2018, takes away funding powers from the proposed regulator and gives it powers to ensure academic quality and even close down bogus institutions.

Stakeholders in the higher education sector can mail their suggestions at reformofugc@gmail.com by 5 pm on July 7, 2018.

There is no plan to merge all higher education regulators, as was proposed through a planned agency called HEERA, which was supposed to be put in place as a super regulator.

The present proposal, said secretary (higher education) R. Subrahmanyam, is to replace the UGC. Once this is done after the HECI Bill is passed by Parliament, the technical education regulator AICTE and the teachers' education regulator NCTE will also be reformed on similar lines.

The new regime separates the academic and funding aspects of higher education. While HECI will be in charge of ensuring academic quality in universities and colleges, the Ministry of Human Resource Development (MHRD) - or another mechanism that will be put in place later - will be responsible for funding universities and colleges.

### Closing down

Another key feature of the draft legislation is that "the Regulator will have powers to enforce compliance to the academic quality standards and will have the power to order closure of sub-standard and bogus institutions", said an MHRD release.

Moreover, non-compliance could result in fines or even a jail sentence.

Till now, the UGC had no such powers. All it could do was to release a list of bogus institutions and not recognise their degrees.

"HECI is tasked with the mandate of improving academic standards with specific focus on learning outcomes, evaluation of academic performance by institutions, mentoring of institutions, training of teachers, promote use of educational technology, etc.," said the release.

"It will develop norms for setting standards for opening and closure of institutions, provide for greater flexibility and autonomy to institutions, lay standards for appointments to critical leadership positions at the institutional level irrespective of university started under any law (including state list)," it said.

A senior official of the MHRD said that UGC staff would be retrained to adapt to the HECI regime.

### UGC vs HECI

1 The UGC's regulatory power included quality assessment and giving grants. The HECI will just ensure academic quality while MHRD will give grants to institutions

2 The UGC conducted inspections to assess institutions. The HECI will practically do away with these and shift to a regime of "transparent disclosures" instead

3 The UGC published lists of bogus institutions once in a while. The HECI will be empowered to shut down sub-standard and bogus instititions. Non-compliance by institutions could also lead to jail terms

FOLLOW US:
thehindu.com
facebook.com/thehindu
twitter.com/the_hindu
THE HINDU
THURSDAY, JUNE 28, 2018
INDIA'S NATIONAL NEWSPAPER SINCE 1878
PRINTED AT · CHENNAI · COIMBATORE · BENGALURU · HYDERABAD · MADURAI · NOIDA · VISAKHAPATNAM · THIRUVANANTHAPURAM · KOCHI · VIJAYAWADA · MANGALURU · TIRUCHIRAPALLI · KOLKATA · HUBBALLI · MOHALI · MALAPPURAM · MUMBAI · TIR

# ICSSR's new vision: make research relevant to policy

## The apex body has sent the proposal to the government

VIKAS PATHAK
NEW DELHI

In an attempt at making research projects awarded by the Indian Council of Social Science Research (ICSSR) move from "pure ideological research" to one that is in sync with policy imperatives, the apex social science research body has formulated a blue print of key areas for future research.

It has sent a vision document called IMPRESS (Impactful Policy Research in Social Sciences) to the government, sources say.

This apart, it has also made a tentative list of themes on which it would like to support research.

"We believe that social science research should focus on areas that can link research to pressing policy needs of the time. Social science is close to society and research in it should contribute to solving the problems we face," a well-placed source said on condition of anonymity. The ICHR awards doctoral and post-doctoral fellowships. It also awards minor and major projects. In future, proposals that are related to the thrust areas are more likely to pass muster, though other proposals also can.

> One thrust area is the idea of simultaneous polls to the Lok Sabha and State legislative assemblies

The document shared with the government identifies many thrust areas. These include research proposals on public private partnerships, food security, Make In India (a key policy initiative of the present government), federalism, regionalism and its implications, etc.

Significantly, one of the thrust areas mentioned in the document is the idea of simultaneous elections to the Lok Sabha and State legislative assemblies, another idea supported by the present government.

Fake news, paid news and media ownership also figure among the thrust areas for research, the official said.

The ICSSR has also internally formulated some key themes for research, apart from the document shared with the Ministry of Human Resource Development.

These include agrarian issues, farmers' distress, agricultural growth, poverty alleviation, revitalisation of manufacturing, trade and investment policy, liberalisation and lost opportunities, etc.

FOLLOW US:
thehindu.com
facebook.com/thehindu
twitter.com/the_hindu

THURSDAY, JUNE 28, 2018

THE HINDU

INDIA'S NATIONAL NEWSPAPER SINCE 1878

PRINTED AT · CHENNAI · COIMBATORE · BENGALURU · HYDERABAD · MADURAI · NOIDA · VISAKHAPATNAM · THIRUVANANTHAPURAM · KOCHI · VIJAYAWADA · MANGALURU · TIRUCHIRAPALLI · KOLKATA · HUBBALLI · MOHALI · MALAPPURAM · MUMBAI · TIR

# Engineering students will have to complete mini-project from this year

## This is in addition to the final project that they have to submit; syllabi of several courses to be revamped

**STAFF REPORTER**
**BENGALURU**

It will now be compulsory for engineering students of the Visvesvaraya Technological University (VTU) to complete a mini-project from the 2018-19 academic year. This is in addition to the final project that students have to to submit.

Speaking about this at a press conference on Wednesday, Vice-Chancellor Karisiddappa said that students would ave to pursue the mini-project between the fourth and fifth semester. He added that the aim of introducing this was to enhance "employability of students".

According to the Vice-Chancellor, this is part of the model curriculum that would be implemented from the 2018-19 academic year. Besides, the university would also revamp the syllabi of several courses. "Students will be made to teach different computer languages. We are also planning to introduce virtual lab concept," he said.

Starting this year, VTU would also encourage multi-disciplinary projects. "A civil engineering student can take projects in computer science or any other. We are in an era of multidisciplinary learning and projects. Students require sufficient knowledge and they can grasp it this way. Having knowledge in one domain is, however, no longer enough," said the Vice-Chancellor. VTU is also approaching several multinational companies and government companies to improve internship opportunities.

### Jumbling of papers

With the recent question paper leak of one of the engineering papers, the university was considering a "digital jumbling of question papers" where papers would be set online from a common question bank. The university had found that a professor from a private college who was one of the paper-setters was involved in the paper leak and a re-exam had to be ordered.

"We are considering digital question paper setting system to avoid any kind of malpractice by paper-setters; a final decision will be taken soon about it."

## Insurance for students

**STAFF REPORTER**
**BENGALURU**

VTU authorities are in talks with a bank to provide engineering students insurance if they meet with an accident in the labs or on the college premises. Officials said that the modalities would be finalised shortly.

ಸಂಪುಟ Volume 60 | ಸಂಚಿಕೆ Issue 153 | ಪುಟ Pages 12+4
epaper.samyukthakarnataka.com
ಮಂಗಳೂರು Mangaluru | ಹುಬ್ಬಳ್ಳಿ Hubballi | ಬೆಂಗಳೂರು Bangaluru | ಕಲಬುರಗಿ Kalaburagi | ದಾವಣಗೆರೆ Davanagere

ಸಂಯುಕ್ತ ಕರ್ನಾಟಕ
samyukthakarnataka
ಕನ್ನಡಿಗರ ಸಾಕ್ಷಿಪ್ರಜ್ಞೆ
ಎಂಟು ದಶಕದ ನಂಟು

ಗುರುವಾರ Thursday | ಜೂನ್ 28-2018 JUNE | ₹ 5-00



ಪತ್ನಿ ನವಜೋತ್‌ಕೌರ್‌ರಿಂದ ಸರ್ಕಾರಿ ಕೆಲಸದಲ್ಲಿ ಹಸ್ತಕ್ಷೇಪವಾಗಿರುವ ಬಗ್ಗೆ ಸಚಿವ ಸಿಧು ಅವರಿಂದ ಮಾಧ್ಯಮಕ್ಕೆ ಸ್ಪಷ್ಟನೆ....

'ಸಂಜು' ಚಿತ್ರದಲ್ಲಿ ಖ್ಯಾತನಟಿ ನರ್ಗೀಸ್‌ದತ್ ಪಾತ್ರ ನಿರ್ವಹಿಸಲಿರುವ ನಟಿ ಮೊನಿಶಾ ಕೊಯಿರಾಲಾ.

# ಖಾಸಗಿ–ಸ್ವಾಯತ್ತ ವಿವಿಗಳಿಗೂ ಶಿಕ್ಷಣ ಶುಲ್ಕ ನಿಗದಿ


ವೃತ್ತಿಶಿಕ್ಷಣ ಸಂಸ್ಥೆಗಳ ಎಲ್ಲ ಕೋರ್ಸ್‌ಗಳಿಗೂ ಶುಲ್ಕ ನಿಗದಿಪಡಿಸುವ ಸಮಿತಿಯು ಈಗ ಖಾಸಗಿ ಮತ್ತು ಸ್ವಾಯತ್ತ ವಿವಿಗಳಿಗೂ ಶಿಕ್ಷಣ ಶುಲ್ಕ ನಿಗದಿಪಡಿಸಲು ತೀರ್ಮಾನಿಸಿದೆ. ಇದಕ್ಕೆ ಸಂಬಂಧಿಸಿದಂತೆ ಸಾರ್ವಜನಿಕ ವಿಚಾರಣೆ ನಡೆಸಿದ ನಿವೃತ್ತ ನ್ಯಾಯಮೂರ್ತಿ ಶೈಲೇಂದ್ರ ಕುಮಾರ್ ನೇತೃತ್ವದ ಸಮಿತಿ ರಾಜ್ಯದಲ್ಲಿರುವ 8 ಸ್ವಾಯತ್ತ ವಿವಿ ಮತ್ತು 2 ಖಾಸಗಿ ವಿವಿಗಳಿಗೆ ನೋಟಿಸ್ ನೀಡಿತ್ತು. ಈ ವಿವಿ ಪ್ರತಿನಿಧಿಗಳು ಹಾಜರಿದ್ದು ಸಮಿತಿಯ ಅಧಿಕಾರ ವ್ಯಾಪ್ತಿಯಿಂದ ನಾವು ಹೊರಗಿದ್ದೇವೆ ಎಂದು ವಾದಿಸಿದರು. ಸಮಿತಿ ಇದನ್ನು ಒಪ್ಪಲಿಲ್ಲ. ಈಗಿರುವ ಕಾಯ್ದೆಯಂತೆ ಸಮಿತಿಯ ವ್ಯಾಪ್ತಿಗೆ ಬರುವುದರಿಂದ ಶುಲ್ಕ ನಿಗದಿಪಡಿಸಲಾಗುವುದು. ಏನಾದರೂ ಕಾನೂನು ಸಮಸ್ಯೆ ಇದ್ದಲ್ಲಿ ನ್ಯಾಯಾಲಯ ಮೊರೆ ಹೋಗಲು ಸಮಿತಿ ಸಲಹೆ ಮಾಡಿತು. ಕೇಂದ್ರದ ವ್ಯಾಪ್ತಿಗೆ ಬರುವುದರಿಂದ ನಮಗೆ ರಾಜ್ಯ ಸರ್ಕಾರ ರಚಿಸಿದ ಸಮಿತಿಯ ಆದೇಶ ಅನ್ವಯವಾಗುವುದಿಲ್ಲ ಎಂದು ವಿವಿ ಆಡಳಿತ ಮಂಡಳಿ ವಾದಿಸಿತು. ಇದನ್ನು ಸಮಿತಿ ಒಪ್ಪಲಿಲ್ಲ. ಹೀಗಾಗಿ ಎಲ್ಲ ವೃತ್ತಿ ಶಿಕ್ಷಣ ಸಂಸ್ಥೆಗಳಿಗೂ ಶಿಕ್ಷಣ ಶುಲ್ಕ ನಿಗದಿಪಡಿಸಿದಂತಾಗಿದೆ.

## ಸುಪ್ರೀಂ ನಿರ್ದೇಶನ

ಹಿಂದೆ ಎಲ್ಲ ವೃತ್ತಿ ಶಿಕ್ಷಣ ಸಂಸ್ಥೆಗಳು ಮನಬಂದಂತೆ ವಂತಿಗೆ ಶುಲ್ಕ ಪಡೆಯುತ್ತಿದ್ದವು. ವಿದ್ಯಾರ್ಥಿಗಳು ಸರ್ಕಾರದ ವಿರುದ್ಧ ಬೃಹತ್ ಪ್ರತಿಭಟನೆ ನಡೆಸಿದರು. ಆಗ ಪ್ರಕರಣ ಸುಪ್ರೀಂ ಕೋರ್ಟ್ ವಿಚಾರಣೆಗೆ ಹೋಯಿತು. 2003 ರಲ್ಲಿ ನ್ಯಾಯಾಲಯ ವೃತ್ತಿ ಶಿಕ್ಷಣಕ್ಕೆ ಸಂಬಂಧಿಸಿದಂತೆ ಪ್ರತಿ ರಾಜ್ಯವೂ ಪ್ರತಿ ವರ್ಷ ಎರಡು ಸಮಿತಿಗಳನ್ನು ರಚಿಸಬೇಕು. ಎರಡೂ ಸಮಿತಿಗಳಿಗೆ ನಿವೃತ್ತ ಹೈಕೋರ್ಟ್ ನ್ಯಾಯಮೂರ್ತಿಗಳ ಅಧ್ಯಕ್ಷರಾಗಿರಬೇಕು. ಇವರ ಹೆಸರನ್ನು ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಗಳು ಸೂಚಿಸಬೇಕು. ರಾಜ್ಯ ಸರ್ಕಾರ ನೇಮಿಸಬೇಕು. ಇದನ್ನು ಹೊರತುಪಡಿಸಿ ಸರ್ಕಾರದ ಪಾತ್ರ ಏನೂ ಇಲ್ಲ. ಸಮಿತಿ ಸ್ವತಂತ್ರವಾಗಿ ನಿರ್ವಹಿಸಿ ಪ್ರತಿ ಕಾಲೇಜಿಗೂ ಶುಲ್ಕ ನಿಗದಿಪಡಿಸುತ್ತದೆ ಎಂದು ತಿಳಿಸಿದೆ.

## ಕರ್ನಾಟಕ ಕಾಯ್ದೆ

ರಾಜ್ಯ ಸರ್ಕಾರ 2006 ರಲ್ಲಿ ಕಾಯ್ದೆ ರಚಿಸಿ ಎರಡು ಸಮಿತಿಗಳನ್ನು ಮುಖ್ಯ ನ್ಯಾಯಮೂರ್ತಿಗಳ ಆದೇಶದಂತೆ ಪ್ರತಿ ವರ್ಷ ಇಬ್ಬರು ನ್ಯಾಯಮೂರ್ತಿಗಳನ್ನು ನೇಮಕ ಮಾಡುತ್ತ ಬಂದಿದೆ. ಈ ಕಾಯ್ದೆಗೆ ನಂತರದ ದಿನಗಳಲ್ಲಿ ತಿದ್ದುಪಡಿ ತರಲಾಯಿತು. ಇದು ಇಡೀ ಕಾಯ್ದೆಯ ಮೂಲ ಉದ್ದೇಶಕ್ಕೆ ಧಕ್ಕೆ ತಂದಿದ್ದರೂ ಯಾರೂ ಇದನ್ನು ನ್ಯಾಯಾಲಯದಲ್ಲಿ ಪ್ರಶ್ನಿಸಲಿಲ್ಲ.




## ಒಮ್ಮತದ ಒಪ್ಪಂದ

ರಾಜ್ಯ ಸರ್ಕಾರ ಮೂಲ ಕಾಯ್ದೆಗೆ 4(ಎ) ಮತ್ತು 4 (ಬಿ) ತಿದ್ದುಪಡಿ ತಂದು ಶುಲ್ಕ ಮತ್ತು ಪ್ರವೇಶ ಪ್ರಕ್ರಿಯೆ ನಿಯಂತ್ರಿಸಲು ಪ್ರತ್ಯೇಕ ಸಮಿತಿಗಳಿದ್ದರೂ ಎಲ್ಲ ಖಾಸಗಿ ಕಾಲೇಜುಗಳೊಂದಿಗೆ ಮಾತುಕತೆ ನಡೆಸಿ ಒಮ್ಮತದ ಶುಲ್ಕ ಮತ್ತು ಪ್ರವೇಶ ನಿಯಮ ಪಾಲಿಸುತ್ತ ಬಂದಿತ್ತು. ಇದಕ್ಕೆ ಕಾಯ್ದೆಯಲ್ಲಿ ಅವಕಾಶ ಇರಲಿಲ್ಲ. ಆದರೂ ಸರ್ಕಾರ ಎಲ್ಲ ಸಮಿತಿಗಳ ಅಧ್ಯಕ್ಷರಿಗೆ ತಮ್ಮ ವರದಿ ನೀಡಿ ಮನೆಗೆ ಹೋಗುವಂತೆ ತಿಳಿಸುತ್ತಿತ್ತು. ಕಳೆದ ವರ್ಷದವರೆಗೆ ಎಲ್ಲ ಅಧ್ಯಕ್ಷರು ತಮ್ಮ ವರದಿಯನ್ನು ಲಕೋಟೆಯಲ್ಲಿ ಹಾಕಿ ಸರ್ಕಾರಕ್ಕೆ ಸಲ್ಲಿಸಿ ಹೋಗುತ್ತಿದ್ದರು. ಸರ್ಕಾರ ಈ ಲಕೋಟೆಯನ್ನು ಬಿಚ್ಚಿಕೂಡ ನೋಡುತ್ತಿರಲಿಲ್ಲ.

## ಶೈಲೇಂದ್ರ ಸಮಿತಿ

ಈ ಬಾರಿ ನೇಮಕಗೊಂಡ ನ್ಯಾಯಮೂರ್ತಿ ಶೈಲೇಂದ್ರ ಸಮಿತಿ ಸರ್ಕಾರಕ್ಕೆ ವರದಿ ಸಲ್ಲಿಸಲು ಒಪ್ಪಲಿಲ್ಲ. ಕಾಯ್ದೆಯಂತೆ ಸಮಿತಿ ಸ್ವತಂತ್ರವಾಗಿ ಕೆಲಸ ಮಾಡುತ್ತದೆ. ಪ್ರತಿ ಕಾಲೇಜಿಗೂ ಶಿಕ್ಷಣ ಶುಲ್ಕ ನಿಗದಿಪಡಿಸಿ ಪ್ರತ್ಯೇಕ ಆದೇಶ ಹೊರಡಿಸಲಾಗುವುದು. ಅದರ ಪ್ರತಿಯನ್ನು ಸರ್ಕಾರಕ್ಕೆ ನೀಡಲಾಗುವುದು. ಸಮಿತಿಯಲ್ಲಿ ವೈದ್ಯಕೀಯ ಮತ್ತು ಎಂಜಿನಿಯರಿಂಗ್ ಶಿಕ್ಷಣ ಇಲಾಖೆ ನಿರ್ದೇಶಕರು ಸಮಿತಿಯ ಸದಸ್ಯ ಕಾರ್ಯದರ್ಶಿಗಳಾಗಿದ್ದಾರೆ. ಹೀಗಾಗಿ ಅವರಿಗೆ ಸಮಿತಿ ತೀರ್ಮಾನಗಳು ತಿಳಿದಿರುತ್ತದೆ. ಸಿಇಟಿ ಅಧಿಕಾರಿಗಳಿಗೂ ಪ್ರತಿ ನೀಡಲಾಗಿದೆ.

## ಶುಲ್ಕ ಏರಿಕೆ

ಸುಪ್ರೀಂ ಕೋರ್ಟ್ ಆದೇಶ ಹೊರಡಿಸುವಾಗ ಶುಲ್ಕ ಏರಿಕೆ ಪ್ರತಿ ವರ್ಷ ಶೇಕಡ 8 ಕ್ಕಿಂತ ಅಧಿಕವಾಗುವಂತಿಲ್ಲ ಎಂದು ಸ್ಪಷ್ಟಪಡಿಸಿದೆ. ಅದನ್ನೂ ಕಾಯ್ದೆಯಲ್ಲೂ ನಮೂದಿಸಲಾಗಿದೆ. ಇದನ್ನು ಖಾಸಗಿ ಶಿಕ್ಷಣ ಸಂಸ್ಥೆಗಳು ನೋಡಲು ಹೋಗೇ ಇರಲಿಲ್ಲ. ಪ್ರತಿ ವರ್ಷ ಸರ್ಕಾರದೊಂದಿಗೆ ಮಾತುಕತೆ ನಡೆಸಿ ಒಪ್ಪಂದ ಮಾಡಿಕೊಂಡು ಶೇಕಡ 8 ಕ್ಕಿಂತ ಹೆಚ್ಚು ಶುಲ್ಕ ಏರಿಕೆ ಮಾಡಿಕೊಂಡಿದ್ದವು.

## ದಾಖಲೆಗಳ ಸಲ್ಲಿಕೆ

ಸಮಿತಿ ಮುಂದೆ ಯಾವ ಕಾಲೇಜೂ ಸಮರ್ಪಕವಾಗಿ ಲೆಕ್ಕಪತ್ರ ಸಲ್ಲಿಸಿಲ್ಲ. ಸಮಿತಿಯಲ್ಲಿ ಒಬ್ಬರು ಲೆಕ್ಕಪ–ರಿಶೋಧಕರಿದ್ದು, ಪ್ರತಿ ಕಾಲೇಜಿನ ಆಯವ್ಯಯವನ್ನು ಪರಿಶೀಲಿಸಿ ಬಹುತೇಕ ಲೆಕ್ಕಗಳಿಗೆ ದಾಖಲೆಗಳಿಲ್ಲ. ಅನಗತ್ಯ ವೆಚ್ಚಗಳಿವೆ. ಇದಕ್ಕೂ ವಿದ್ಯಾರ್ಥಿಗಳ ಶಿಕ್ಷಣ–ಕ್ಕೂ ಸಂಬಂಧವಿಲ್ಲ. ಆಡಳಿತ ಮಂಡಳಿಯ ಅಧ್ಯಕ್ಷರ ಹವಾ ನಿಯಂತ್ರಿತ ಕಾರಿನ ವೆಚ್ಚವೂ ಕೆಲವು ಕಡೆ ಸೇರಿವೆ. ಇವುಗಳನ್ನು ವಿದ್ಯಾರ್ಥಿಗಳು ಭರಿಸಬೇಕಿಲ್ಲ. ಸರಿಯಾದ ಲೆಕ್ಕಪತ್ರ ಇಲ್ಲದ ಕಾರಣ ಸಮಿತಿ ಪ್ರತಿ ಕಾಲೇಜಿನ ಆಯವ್ಯಯವನ್ನು ಬೇರೆ ಮೂಲಗಳ ಮೂಲಕ ಪರಿಶೀಲನೆ ನಡೆಸಿ ಕಳೆದ ವರ್ಷ ಕಾಲೇಜು ಸರ್ಕಾರದೊಂದಿಗೆ ಒಪ್ಪಂದ ಮಾಡಿಕೊಂಡ ವಿದ್ಯಾರ್ಥಿಗಳಿಂದ ಪಡೆದ ಶಿಕ್ಷಣ ಶುಲ್ಕವನ್ನೇ ಆಧಾರವಾಗಿಟ್ಟುಕೊಂಡು ಕಾಯ್ದೆಗಳ ನಿಯಮದಂತೆ ಅದಕ್ಕೆ ಶೇಕಡ 8 ರಷ್ಟು ಏರಿಕೆಯನ್ನು ನೀಡಿದೆ.

> **ಶಿಕ್ಷಣ ಸಂಸ್ಥೆಗಳು ವ್ಯಾಪಾರಿ ಕೇಂದ್ರಗಳಲ್ಲ**
>
> ಶಿಕ್ಷಣ ಸಂಸ್ಥೆಗಳು ವ್ಯಾಪಾರಿ ಕೇಂದ್ರಗಳಾಗಬಾರದು. ಲಾಭಗಳಿಸಬೇಕೆಂದು ಬಯಸುವವರು ಬೇರೆ ಉದ್ಯಮಕ್ಕೆ ಹೋಗುವುದು ಒಳ್ಳೆಯದು. ಇದು ದೇಶ ಕಟ್ಟುವ ಕೆಲಸ. ಇಲ್ಲಿ ಕೆಲಸ ಮಾಡುವವರಿಗೆ ನಷ್ಟ ಆಗದಂತೆ ನೋಡಿಕೊಳ್ಳುವುದಷ್ಟೇ ಸಮಿತಿ ಉದ್ದೇಶ.
>
> **। ನ್ಯಾ. ಶೈಲೇಂದ್ರ ಕುಮಾರ್,**
> ಅಧ್ಯಕ್ಷರು, ವೃತ್ತಿಶಿಕ್ಷಣ ಶುಲ್ಕ ನಿಯಂತ್ರಣ ಸಮಿತಿ

## ಅಸಮಾಧಾನ

ಕೆಲವು ಸಂಸ್ಥೆಗಳನ್ನು ಹೊರತುಪಡಿಸಿದರೆ ಬಹುತೇಕ ಕಾಲೇಜುಗಳು ಶೇಕಡ 8 ಏರಿಕೆಯನ್ನು ಒಪ್ಪಿಲ್ಲ. ಸರ್ಕಾರಕ್ಕೆ ಮನವಿಯನ್ನೂ ಸಲ್ಲಿಸಿದೆ. ಆದರೆ ಕಾಯ್ದೆಯಲ್ಲೇ ಇದನ್ನು ಒಪ್ಪಿಕೊಳ್ಳಲಾಗಿತ್ತು ಎಂಬುದನ್ನು ಮರೆಯುತ್ತಿದ್ದಾರೆ. ಈಗಲೂ ಸರ್ಕಾರ ಮಧ್ಯಪ್ರವೇಶ ಮಾಡಬೇಕೆಂದು ಒತ್ತಾಯಿಸುತ್ತಿದ್ದಾರೆ. ಸರಕಾರ ಮೌನವಹಿಸಿದೆ.

## ಅನಿವಾಸಿ ಭಾರತೀಯ

ಅನಿವಾಸಿ ಭಾರತೀಯ ವಿದ್ಯಾರ್ಥಿಗಳಿಗೆ 10 ಪಟ್ಟು ಹೆಚ್ಚು ಶುಲ್ಕ ನಿಗದಿಪಡಿಸಲಾಗಿದ್ದು, ಇದರಲ್ಲಿ ಬರುವ ಹೆಚ್ಚುವರಿ ಹಣವನ್ನು ಪ್ರತ್ಯೇಕ ಖಾತೆಯಲ್ಲಿಟ್ಟು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟವರ್ಗ ಹಾಗೂ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಶುಲ್ಕಕ್ಕೆ ಹೊಂದಾಣಿಕೆ ಮಾಡಿಕೊಳ್ಳಬೇಕು. ಯಾವುದೇ ಕಾರಣಕ್ಕೂ ಈ ಹಣವನ್ನು ಬೇರೆ ಉದ್ದೇಶಕ್ಕೆ ಬಳಸುವಂತಿಲ್ಲ ಎಂದು ಸಮಿತಿ ತಿಳಿಸಿದೆ.

ಗುರುವಾರ, ಜೂನ್ 28, 2018 | ಮಂಗಳೂರು | ₹ 5.00 | ಸಂಪುಟ 20 | ಸಂಚಿಕೆ 178 | ಪುಟ 24 + 2

www.prajavani.net

f/prajavani.net

# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಹೆಣ್ಣುಮಕ್ಕಳಿಗೆ ಭಾರತದಲ್ಲೇ ಹೆಚ್ಚು ಅಪಾಯ 7

ಕಾವೇರಿ: 30ಕ್ಕೆ ಸರ್ವಪಕ್ಷ ಸಭೆ 5

| ಸೆನ್ಸೆಕ್ಸ್ | ನಿಫ್ಟಿ | ಚಿನ್ನ (Std. 10g) | ಶುದ್ಧ ಬೆಳ್ಳಿ (kg) | ₹/$ |
|---|---|---|---|---|
| 35,217 | 10,671 | ₹30,679 (ಬೆಂಗಳೂರು) | ₹40,000 (ಬೆಂಗಳೂರು) | 68.61 |

ಇತಿಹಾಸ ಸೇರಲಿರುವ ವಿಶ್ವವಿದ್ಯಾಲಯ ಅನುದಾನ ಆಯೋಗ: ಹೊಸ ಮಸೂದೆಯ ಕರಡು ಸಿದ್ಧ

## ಯುಜಿಸಿ ಬದಲು ರಾಷ್ಟ್ರೀಯ ಶಿಕ್ಷಣ ಆಯೋಗ

ಪ್ರಜಾವಾಣಿ ವಾರ್ತೆ

ನವದೆಹಲಿ: ಶಿಕ್ಷಣ ಕ್ಷೇತ್ರ ನಿಯಂತ್ರಣಕ್ಕೆ ವಿಶ್ವವಿದ್ಯಾಲಯ ಅನುದಾನ ಆಯೋಗದ (ಯುಜಿಸಿ) ಬದಲಿಗೆ ಹೊಸ ಸಂಸ್ಥೆಯನ್ನು ಸ್ಥಾಪಿಸಲು ಕೇಂದ್ರ ಸರ್ಕಾರ ಮುಂದಾಗಿದೆ. ನಿಯಮಗಳನ್ನು ಅನುಸರಿಸುವಂತೆ ಆದೇಶಿಸುವ ಮತ್ತು ಕಳಪೆ ಗುಣಮಟ್ಟದ ಹಾಗೂ ನಕಲಿ ಸಂಸ್ಥೆಗಳನ್ನು ಮುಚ್ಚಿಸುವ ಅಧಿಕಾರವನ್ನು ಪ್ರಸ್ತಾವಿತ ಸಂಸ್ಥೆಗೆ ನೀಡಲು ಉದ್ದೇಶಿಸಲಾಗಿದೆ.

ಪ್ರಸ್ತಾವಿತ ಸಂಸ್ಥೆಗೆ ಭಾರತೀಯ ಉನ್ನತ ಶಿಕ್ಷಣ ಆಯೋಗ (ಎಚ್‌ಇಸಿಐ) ಎಂದು ಹೆಸರು ಇರಿಸಲಾಗುವುದು. ವಿಶ್ವವಿದ್ಯಾಲಯಗಳು ಮತ್ತು ಕಾಲೇಜುಗಳು ನಿಯಮ ಮತ್ತು ನಿರ್ದೇಶನಗಳನ್ನು ಅನುಸರಿಸದೆ ಇದ್ದರೆ ದಂಡ ವಿಧಿಸುವ ಅಧಿಕಾರ ಈ ಆಯೋಗಕ್ಕೆ ಇರಲಿದೆ.

ದಂಡ ಕಟ್ಟದೇ ಇದ್ದರೆ ಅಂತಹ ಸಂಸ್ಥೆಗಳ ಮುಖ್ಯಸ್ಥರು ಮತ್ತು ಆಡಳಿತ ಮಂಡಳಿ ಸದಸ್ಯರ ವಿರುದ್ಧ ಅಪರಾಧ ದಂಡ ಸಂಹಿತೆ (ಸಿಆರ್‌ಪಿಸಿ) ಅಡಿಯಲ್ಲಿ ಪ್ರಕರಣ ದಾಖಲಿಸಬಹುದು. ಈ ತಪ್ಪಿಗೆ ಗರಿಷ್ಠ ಮೂರು ವರ್ಷ ಶಿಕ್ಷೆ ವಿಧಿಸಲು ಅವಕಾಶ ಇದೆ.

1956ರ ಯುಜಿಸಿ ಕಾಯ್ದೆಯನ್ನು ರದ್ದುಪಡಿಸಿ ಎಚ್‌ಇಸಿಐ ಸ್ಥಾಪಿಸುವ ಮಸೂದೆಯ ಕರಡನ್ನು ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯ (ಎಚ್‌ಆರ್‌ಡಿ) ಸಿದ್ಧಪಡಿಸಿದೆ. ಉನ್ನತ ಶಿಕ್ಷಣದ ಗುಣಮಟ್ಟ ಹೆಚ್ಚಿಸುವುದು ಯುಜಿಸಿಯನ್ನು ರದ್ದುಪಡಿಸುವುದರ ಹಿಂದಿನ ಉದ್ದೇಶ ಎಂದು ಹೇಳಲಾಗಿದೆ.

ರಾಜ್ಯ ಮತ್ತು ಕೇಂದ್ರದ ಶಾಸನಗಳ ಮೂಲಕ ಸ್ಥಾಪನೆಯಾದ ಎಲ್ಲ ವಿಶ್ವವಿದ್ಯಾಲಯಗಳು, ಡೀಮ್ಡ್ ವಿಶ್ವವಿದ್ಯಾಲಯದ ಸ್ಥಾನ ಹೊಂದಿರುವ ಸಂಸ್ಥೆಗಳಿಗೆ ಎಚ್‌ಇಸಿಐ ಅನ್ವಯ ಆಗಲಿದೆ.

### ಪ್ರಸ್ತಾವಗಳು

- ಭಾರತೀಯ ಸಾಗರೋತ್ತರ ಪೌರರನ್ನು ಅಧ್ಯಕ್ಷರನ್ನಾಗಿಸಲು ಅವಕಾಶ
- ಎಚ್‌ಇಸಿಐ ಅಧ್ಯಕ್ಷರನ್ನು ನೇಮಿಸುವುದು ಕೇಂದ್ರ ಸರ್ಕಾರದ ಅಧಿಕಾರ
- ಸಮಿತಿಯಲ್ಲಿ ಉಪಾಧ್ಯಕ್ಷರು ಮತ್ತು ಇತರ 12 ಸದಸ್ಯರಿರುತ್ತಾರೆ



ಯುಜಿಸಿ

### ಸದಸ್ಯತ್ವ ವಿವರ: ಎಚ್‌ಆರ್‌ಡಿ

ಸಚಿವಾಲಯದ ಉನ್ನತ ಶಿಕ್ಷಣ ಇಲಾಖೆ, ಕೌಶಲ ಅಭಿವೃದ್ಧಿ ಮತ್ತು ಉದ್ಯಮಶೀಲತಾ ಸಚಿವಾಲಯ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಕಾರ್ಯದರ್ಶಿಗಳು ಎಚ್‌ಇಸಿಐನಲ್ಲಿ ಕೇಂದ್ರ ಸರ್ಕಾರವನ್ನು ಪ್ರತಿನಿಧಿಸುವ ಸದಸ್ಯರಾಗಿರುತ್ತಾರೆ.

ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್ ಮತ್ತು ಶಿಕ್ಷಕರ ಶಿಕ್ಷಣದ ರಾಷ್ಟ್ರೀಯ ಪರಿಷತ್‌ನ ಅಧ್ಯಕ್ಷರು ನಿಯಂತ್ರಣ ಸಂಸ್ಥೆಗಳ ಪ್ರತಿನಿಧಿಗಳು ಎಂಬ ಕಾರಣಕ್ಕೆ ಸದಸ್ಯತ್ವ ಪಡೆಯುತ್ತಾರೆ. ಶಿಕ್ಷಣ ಗುಣಮಟ್ಟದ ಮಾನ್ಯತೆಯ ಎರಡು ಸಂಸ್ಥೆಗಳ ಮುಖ್ಯಸ್ಥರನ್ನೂ ಸದಸ್ಯರನ್ನಾಗಿ ಮಾಡಲಾಗುತ್ತದೆ.

ಪ್ರತಿಷ್ಠಿತ ವಿಶ್ವವಿದ್ಯಾಲಯಗಳ ಇಬ್ಬರು ಕುಲಪತಿಗಳು, ಇಬ್ಬರು ಪ್ರಾಧ್ಯಾಪಕರು ಮತ್ತು ಉದ್ಯಮದ ಹಿರಿಯರೊಬ್ಬರು ಸದಸ್ಯರಲ್ಲಿ ಸೇರಿರುತ್ತಾರೆ.

ಎಚ್‌ಇಸಿಐಗೆ ಸಲಹಾ ಪರಿಷತ್ತು ಇರುತ್ತದೆ. ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವರು ಇದರ ಅಧ್ಯಕ್ಷರಾಗಿರುತ್ತಾರೆ. ರಾಜ್ಯಗಳ ಉನ್ನತ ಶಿಕ್ಷಣ ಪರಿಷತ್‌ನ ಉಪಾಧ್ಯಕ್ಷರು ಸಲಹಾ ಪರಿಷತ್ ಸದಸ್ಯರಾಗಿರುತ್ತಾರೆ.

### ಶೋಧ ಸಮಿತಿ

ಸಂಪುಟ ಕಾರ್ಯದರ್ಶಿ ನೇತೃತ್ವದ ಶೋಧ ಮತ್ತು ಆಯ್ಕೆ ಸಮಿತಿಯು ಎಚ್‌ಇಸಿಐ ಅಧ್ಯಕ್ಷ ಸ್ಥಾನಕ್ಕೆ ಹೆಸರುಗಳನ್ನು ಶಿಫಾರಸು ಮಾಡಲಿದೆ. ಉಪಾಧ್ಯಕ್ಷರ ಹುದ್ದೆಗೂ ಈ ಸಮಿತಿಯೇ ಹೆಸರುಗಳನ್ನು ಶಿಫಾರಸು ಮಾಡಲಿದೆ. ಆದರೆ, ಉಪಾಧ್ಯಕ್ಷ ಹುದ್ದೆಗೆ ಹೆಸರು ಶಿಫಾರಸು ಮಾಡುವ ಸಮಿತಿಯಲ್ಲಿ ಎಚ್‌ಇಸಿಐ ಅಧ್ಯಕ್ಷರು ಸದಸ್ಯರಾಗಿರುತ್ತಾರೆ.

### ಜನರ ಸಲಹೆ, ಸೂಚನೆಗೆ ಅವಕಾಶ

ಕರಡು ಮಸೂದೆಯ ಬಗ್ಗೆ ಸಲಹೆ ಮತ್ತು ಸೂಚನೆಗಳನ್ನು ನೀಡುವಂತೆ ಶಿಕ್ಷಣ ತಜ್ಞರು ಮತ್ತು ಇತರರಿಗೆ ಎಚ್‌ಆರ್‌ಡಿ ಸಚಿವ ಪ್ರಕಾಶ್ ಜಾವಡೇಕರ್ ಮನವಿ ಮಾಡಿದ್ದಾರೆ.

ಜುಲೈ 7ರಂದು ಸಂಜೆ 5 ಗಂಟೆಯವರೆಗೆ ಸಲಹೆ, ಸೂಚನೆಗಳನ್ನು ನೀಡಲು ಅವಕಾಶ ಇದೆ ಎಂದು ಸರಣಿ ಟ್ವೀಟ್‌ಗಳ ಮೂಲಕ ಜಾವಡೇಕರ್ ತಿಳಿಸಿದ್ದಾರೆ.

ಗುರುವಾರ 28.6.2018

• ಬೆಂಗಳೂರು • ಬೆಳಗಾವಿ • ಶಿವಮೊಗ್ಗ • ಹುಬ್ಬಳ್ಳಿ • ಮಂಗಳೂರು • ಕಲಬುರಗಿ

ಸಂಪುಟ 52 • ಸಂಚಿಕೆ 178 • ಪುಟ 12+4 • ಬೆಲೆ ₹5

epaper.kannadaprabha.in


ಫುಟ್ಬಾಲ್ ವಿಶ್ವಕಪ್: ಹಾಲಿ ಚಾಂಪಿಯನ್ ಜರ್ಮನಿ ಔಟ

ಕೊರಿಯಾ ವಿರುದ್ಧ 2-0 ಸೋಲು | ಎಫ್ ಗುಂಪಲ್ಲಿ 1 ಗೆಲುವು, 2 ಸೋಲು | ಲೀಗ್‌ನಲ್ಲೇ ಹೊರಬಿದ್ದ 2014ರ ವಿಜೇತ

# ಕನ್ನಡಪ್ರಭ

ನೇರ. ದಿಟ್ಟ. ನಿರಂತರ

CENTRAL LIBRARY
Adyar, Mangalore



ಲಾಲು ಪುತ್ರ
ಹಿಂದಿ ಸಿನಿಮಾ

'ರುದ್ರಾ - ದಿ ಅವತಾರ್'
ಸಿನಿಮಾದಲ್ಲಿ ನಾಯಕನಾ
ನಲ್ಲಿ ಫಸ್ಟ್‌ಲುಕ್ ಪ್ರಕಟಿಸಿ
ಸಚಿವ ತೇಜಪ್ರತಾಪ್ ಯ

ಹೊಸ ವ್ಯವಸ್ಥೆ | ಭಾರತೀಯ ಉನ್ನತ ಶಿಕ್ಷಣ ಆಯೋಗ ಸ್ಥಾಪನೆಗೆ ತಯಾರಿ | ಕರಡು ಕಾಯ್ದೆ ಪ್ರಕಟಿಸಿದ ಮಾನವ ಸಂಪನ್ಮೂಲ ಸಚಿವಾಲಯ

## ಯುಜಿಸಿಯನ್ನೇ ರದ್ದು ಮಾಡಲು ಕೇಂದ್ರ ಸಜ್ಜು

ನವದೆಹಲಿ: ಅಧಿಕಾರಕ್ಕೆ ಬರುತ್ತಿದ್ದಂತೆ ನೆಹರು ಕಾಲದ ಯೋಜನಾ ಆಯೋಗವನ್ನು ರದ್ದುಗೊಳಿಸಿ ನೀತಿ ಆಯೋಗ ಅಸ್ತಿತ್ವಕ್ಕೆ ತಂದಿದ್ದ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಇದೀಗ ವಿಶ್ವವಿದ್ಯಾಲಯ ಧನಸಹಾಯ (ಯುಜಿಸಿ) ರದ್ದುಗೊಳಿಸಿ ಹೊಸ ಸಂಸ್ಥೆ ಸೃಷ್ಟಿಸಲು ಮುಂದಾಗಿದೆ.

'ಇನ್‌ಸ್ಪೆಕ್ಷನ್ ರಾಜ್' ಅನ್ನು ಅಂತ್ಯಗೊಳಿಸುವ ಉದ್ದೇಶದೊಂದಿಗೆ ಯುಜಿಸಿಯನ್ನು ರದ್ದುಗೊಳಿಸಿ ಭಾರತೀಯ ಉನ್ನತ ಶಿಕ್ಷಣ ಆಯೋಗ ಸ್ಥಾಪನೆಗೆ ಸರ್ಕಾರ ಮುಂದಾಗಿದೆ. 1956ರ ಯುಜಿಸಿ ಕಾಯ್ದೆ ರದ್ದುಗೊಳಿಸಿ, ಉನ್ನತ ಶಿಕ್ಷಣ ಆಯೋಗ ಸ್ಥಾಪನೆ ಸಂಬಂಧ ಕೇಂದ್ರ ಮಾನವ ಸಂಪನ್ಮೂಲ ಸಚಿವಾಲಯ ತನ್ನ ವೆಬ್‌ಸೈಟ್‌ನಲ್ಲಿ ಬುಧವಾರ ಸಂಜೆ ಕರಡು ಕಾಯ್ದೆಯನ್ನು ಪ್ರಕಟಿಸಿದೆ.

ಯುಜಿಸಿ ರೀತಿ ಅನುದಾನ ಹಂಚಿಕೆ ಮಾಡುವ ಬದಲು ಉದ್ದೇಶಿತ ಉನ್ನತ ಶಿಕ್ಷಣ ಆಯೋಗ ಶೈಕ್ಷಣಿಕ ವಿಷಯಗಳ ಬಗ್ಗೆಯಷ್ಟೇ ಗಮನಹರಿಸಲಿದೆ. ಅನುದಾನ ಕುರಿತ ವಿಷಯಗಳು ಮಾನವ ಸಂಪನ್ಮೂಲ ಸಚಿವಾಲಯಕ್ಕೆ ಹಸ್ತಾಂತರಗೊಳ್ಳಲಿವೆ. ಶೈಕ್ಷಣಿಕ ಗುಣಮಟ್ಟ ಸುಧಾರಣೆ, ಶೈಕ್ಷಣಿಕ ಸಂಸ್ಥೆಗಳ ಕಾರ್ಯನಿರ್ವಹಣೆ ಪರಿಶೀಲನೆ, ಪ್ರೋತ್ಸಾಹ, ಶಿಕ್ಷಕರಿಗೆ ತರಬೇತಿ, ಶೈಕ್ಷಣಿಕ ತಂತ್ರಜ್ಞಾನಗಳ ಬಳಕೆಗೆ ಉತ್ತೇಜನದಂತಹ ವಿಷಯಗಳ ಬಗ್ಗೆ ಆಯೋಗ ಒತ್ತು ನೀಡಲಿದೆ.

ಕರಡು ಕಾಯ್ದೆ ಕುರಿತಂತೆ ಶಿಕ್ಷಣ ತಜ್ಞರು, ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಿಸಿದ ವ್ಯಕ್ತಿಗಳು ಹಾಗೂ ಸಾರ್ವಜನಿಕರು ಜು.7ರ ಸಂಜೆ 5ರೊಳಗೆ ತಮ್ಮ ಅಭಿಪ್ರಾಯ ತಿಳಿಸಬಹುದಾಗಿದೆ. ಅಭಿಪ್ರಾಯ ಸಂಗ್ರಹದ ಬಳಿಕ ಅಗತ್ಯ ಬಿದ್ದರೆ ತಿದ್ದುಪಡಿ ಮಾಡಿ ಅದನ್ನು ಮುಂಬರುವ ಸಂಸತ್ತಿನ ಮುಂಗಾರು ಅಧಿವೇಶನದಲ್ಲೇ ಮಂಡಿಸುವ ಇರಾದೆಯನ್ನು ಕೇಂದ್ರ ಸರ್ಕಾರ ಹೊಂದಿದೆ. ಯುಜಿಜಿ ವ್ಯವಸ್ಥೆಯಲ್ಲಿ ಸುಧಾರಣೆ ತರುವ ಕುರಿತು ಕೇಂದ್ರ ಹಣಕಾಸು ಸಚಿವ ಅರುಣ್ ಜೇಟ್ಲಿ ಅವರು ಕಳೆದ ಬಜೆಟ್‌ನಲ್ಲಿ ಮಾಹಿತಿ ನೀಡಿದ್ದರು.

ನಿಯಂತ್ರಣಾ ವ್ಯವಸ್ಥೆಯಲ್ಲಿನ ಸುಧಾರಣೆ ತರುವುದು. ಈ ಮೂಲಕ ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಹೆಚ್ಚಿನ ಸ್ವಾಯತ್ತೆ ನೀಡುವ ಮತ್ತು ತನ್ಮೂಲಕ ಶೈಕ್ಷಣಿಕ ವಲಯದಲ್ಲಿ ತ್ವರಿತ ಮತ್ತು ಅತ್ಯುತ್ತಮ ಪ್ರಗತಿಗೆ ಒತ್ತು ನೀಡುವ ಸರ್ಕಾರದ ಆಶಯದಂತೆ ಈ ಕರಡು ಕಾಯ್ದೆ ರಚಿಸಲಾಗಿದೆ. ಇದು ಪ್ರಧಾನಿ ನರೇಂದ್ರ ಮೋದಿ ಸರ್ಕಾರದ ಐತಿಹಾಸಿಕ ನಿರ್ಧಾರ ಎಂದು ಕರಡು ಕಾಯ್ದೆ ಕುರಿತು ಕೇಂದ್ರ ಮಾನವ ಸಂಪನ್ಮೂಲ ಖಾತೆ ಸಚಿವ ಪ್ರಕಾಶ್ ಜಾವಡೇಕರ್ ಪ್ರತಿಕ್ರಿಯೆ ನೀಡಿದ್ದಾರೆ.

### ಯುಜಿಸಿ ರದ್ದು ಏಕೆ?


ಹಾಲಿ ವ್ಯವಸ್ಥೆಯಲ್ಲಿ ಯುಜಿಸಿ, ಶೈಕ್ಷಣಿಕ ಗುಣಮಟ್ಟ ಮತ್ತು ಶಿಕ್ಷಣಕ್ಕೆ ಉತ್ತೇಜನ ನೀಡುವ ಕ್ರಮಗಳ ಬಗ್ಗೆ ಗಮನ ಹರಿಸುವುದಕ್ಕಿಂತ ಹೆಚ್ಚಿನ ಗಮನ ಕೇವಲ ಅನುದಾನ ಹಂಚಿಕೆ ಸೇರಿದಂತೆ ಇತರೆ ಕೆಲಸಗಳಿಗೆ ಸೀಮಿತ ಆಗಿದೆ. ಇದರಿಂದಾಗಿ ಶೈಕ್ಷಣಿಕ ವಲಯಕ್ಕೆ ಸಿಗಬೇಕಾದ ಅಗತ್ಯ ಒತ್ತು ಸಿಗುತ್ತಿಲ್ಲ ಎಂಬ ಆರೋಪವಿದೆ. ಈ ದೂರನ್ನು ಪರಿಹರಿಸಿ ಹೊಸ ವ್ಯವಸ್ಥೆ ರಚಿಸುವ ನಿಟ್ಟಿನಲ್ಲಿ ಯುಜಿಸಿ ರದ್ದು ಮಾಡಲು ಕೇಂದ್ರ ಸರ್ಕಾರದ ಪ್ರಸ್ತಾಪ.




### ಹೊಸ ವ್ಯವಸ್ಥೆ ಏನು?

ಯುಜಿಸಿ ಬದಲು ರಚನೆಯಾಗುವ ಭಾರತೀಯ ಉನ್ನತ ಶಿಕ್ಷಣ ಆಯೋಗ, ಉನ್ನತ ಶಿಕ್ಷಣ ಸಂಸ್ಥೆಗಳ ಕಾರ್ಯನಿರ್ವಹಣೆಯಲ್ಲಿ ವಿವಿಧ ನಿಯಂತ್ರಣಾ ವ್ಯವಸ್ಥೆಯ ಹಸ್ತಕ್ಷೇಪ ಕಡಿಮೆ ಮಾಡಲಿದೆ. ಈ ಮೂಲಕ ಅವುಗಳ ತ್ವರಿತ ಬೆಳವಣಿಗೆ ಅವಕಾಶ ಮಾಡಿಕೊಡಲಿದೆ. ಅನುದಾನ ಹಂಚಿಕೆಯಂಥ ಕೆಲಸದ ಬದಲು ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಮಾನ್ಯತೆ ನೀಡುವುದು ಮತ್ತು ಅವುಗಳ ಶೈಕ್ಷಣಿಕ ಗುಣಮಟ್ಟ ಕಾಪಾಡುವ ಕೆಲಸ ಮಾಡಲಿದೆ ಎಂಬ ಚಿಂತನೆ ಕೇಂದ್ರದ್ದು.

THE NEW
INDIAN
EXPRESS
MANGALURU • THURSDAY • JUNE 28, 2018 • ₹6.00 • PAGES 16 • CITY EDITION



# UGC set to go, new body to get its academic powers

## HECI will have no say in the management of institutions; ministry to handle fund release

**EXPRESS NEWS SERVICE**
@ New Delhi

THE six-decade-old University Grants Commission (UGC) appears to be on its last legs. A draft bill placed in public domain by the Union Ministry of Human Resource Development on Wednesday seeks to scrap the UGC and replace it with a new regulatory body called the Higher Education Commission of India (HECI), which will have no say in the management of educational institutions.

The HECI's mandate is to focus on academics alone. Functions to grant funds will be taken over by the ministry itself. The draft will be open for public comments till July 7. The bill aims to end inspection raj in higher education. To do so, regulation will to be done through transparent public disclosure and merit-based decision making on matters regarding standards and quality in higher education.

HECI has also been tasked with improving academic standards with specific focus on learning outcomes, evaluation of academic performance by institutions, mentoring of institutions, training teachers, promoting use of educational technology etc.


### WHAT'S IN THE DRAFT

- UGC on the way out, to be replaced with Higher Education Commission of India
- End of inspection raj with regulation done through transparent public disclosures
- Will set norms for opening and closure of institutions, lay standards for appointment of leadership positions irrespective of State laws
- Will have powers to close sub-standard institutions, slap fines or jail term for non-compliance

Another aspect that will have bearing on the state's powers, is the proposal to develop norms to set standards for opening and closing of institutions, provide for greater flexibility and autonomy to institutions and lay standards for appointments to critical leadership positions at the institutional level irrespective of under which law the University was started (including State law).

The new Act also proposes jail term for non-compliance of academic standards. The regulator will also have the power to order closure of sub-standard and bogus institutions.

THE NEW INDIAN EXPRESS
MANGALURU • THURSDAY • JUNE 28, 2018 • ₹6.00 • PAGES 16 • CITY EDITION



# 75% of PF can be withdrawn after 30 days of unemployment

**EXPRESS NEWS SERVICE**
@ New Delhi

IN good news for employees cross the country, Employees Provident Fund Organisation (EPFO) chairman and Union Labour Minister Santosh Kumar Gangwar on Wednesday said that unemployed members of the EPFO — both private and government — can withdraw 75 per cent of their provident fund till up to one month of termination.

The minister announced the decision after chairing a meet of EPFO officials. "In case a person is unemployed for two months, he or she can withdraw the remaining 25 per cent of the amount as well. Thus, this will enable the employee maintain his or her account with the EPFO," the minister said and added that unemployed people were free to close their accounts after withdrawing the full amount.

"EPFO extends additional facility to unemployed members to avail non-refundable advance up to 75 per cent of outstanding balance in case of unemployed for more than a month. Existing provision of complete withdrawal after two months of unemployment remains unchanged," the EPF India tweeted.

"The decision was taken to ensure that people do not face any hardships in the unfortunate event of termination. It is very hard mentally and financially to cope with job loss. The new rule was brought in with the aim of mitigating the hardship," a labour ministry official said.

Apart from the unemployed clause, employees are allowed to withdraw their provident fund for other reasons like construction or purchase of house, marriages or medical treatment. However, specific criteria need to be met for each of the reasons.

> **In case a person is unemployed for two months, he or she can withdraw the remaining 25 per cent of the amount as well. Thus, this will enable the employee maintain his or her account with the EPFO**
>
> Santosh Kumar Gangwar, Union Labour Minister



THE NEW INDIAN EXPRESS
MANGALURU • THURSDAY • JUNE 28, 2018 • ₹6.00 • PAGES 16 • CITY EDITION



# VTU mulls setting papers through 'digital jumbling'

**EXPRESS NEWS SERVICE** @Bengaluru

FOLLOWING the recent incidents of question paper leak, the Visvesvaraya Technological University (VTU), Belagavi, is mulling the introduction of 'digital jumbling' of question papers.

In a recent question paper leak, the involvement of one of the senior professors of a private engineering college affiliated to VTU has been proven and he was also one of the experts who had set the question papers for the civil engineering branch.

Considering this seriously, the university is thinking of adopting 'digital jumbling' of question papers using technology. Under this system, VTU will upload all the 10 sets of question papers prepared by different professors and the system will jumble them to set a fresh question paper.

Speaking about it, Prof Karisiddappa, vice-chancellor of VTU said, "We are seriously thinking of digital question paper-setting system to avoid any kind of malpractice. A final decision about this will be taken soon."

After the recent question paper leak, the university has decided to file a police complaint against the professor who was involved in the paper leak.

## MINI-PROJECTS

From the next academic year, undergraduate engineering students have to undertake projects in the 4th and 5th semesters itself. Till now, students were asked to take up projects only in the final year, but the university is making 'mini projects' compulsory from the next academic year. The mini projects are part of a newly introduced model curriculum by the university wherein students will be allowed to carry out projects within their college campus during the 4th and 5th semesters. Various technical experts from the industry will assist the students to execute these projects which will carry three credits. Meanwhile, VTU will be allowing inter-disciplinary projects from the current academic year itself. This is being introduced after the introduction of a new curriculum for engineering courses.



ಚಂದ್ರನಲ್ಲಿದೆ ಪರಿಶುದ್ಧ ಪರಮಾಣು ಇಂಧನ: ಇಸ್ರೋ ಅಧ್ಯಯನ 9
ಯುಜಿಸಿ ಬದಲು ಉನ್ನತ ಶಿಕ್ಷಣ ಆಯೋಗ: ಸಲಹೆ ಕೇಳಿದ ಕೇಂದ್ರ 10
ಉಡುಪಿಯಲ್ಲಿ ಪೆಟ್ರೋಲಿಯಂ ಮೀಸಲು ಸಂಗ್ರಹಾಗಾರ: ಕೇಂದ್ರ 9
ಧಾರ್ಮಿಕ ಸ್ವಾತಂತ್ರ್ಯ ಕೂಡ ಮುಖ್ಯ: ನಿಕ್ಕಿ ಹ್ಯಾಲಿ 9

ಮಂಗಳೂರು
ಗುರುವಾರ
28 ಜೂನ್ 2018
ವಿಲಂಬಿ ಸಂವತ್ಸರ, ದಕ್ಷಿಣಾಯನ, ಗ್ರೀಷ್ಮ ಋತು, ನಿಜ ಜ್ಯೇಷ್ಠ ಮಾಸ, ಪೌರ್ಣಿಮಿ
ನಕ್ಷತ್ರ: ಮೂಲ
ಬೆಲೆ ₹ 5.00

ರಾಷ್ಟ್ರ ಜಾಗೃತಿಯ ದೈನಿಕ

# ಹೊಸ ದಿಗಂತ HD

ಸಂಪುಟ 40, ಸಂಚಿಕೆ 102, ಪುಟಗಳು 12+4, ಬೆಂಗಳೂರು-ಮಂಗಳೂರು-ಶಿವಮೊಗ್ಗ-ಹುಬ್ಬಳ್ಳಿ
diganthamlr@gmail.com website: www.hosadigantha.com
REG.No.MNG / 121 / 2018-20 Posted at kodia

ಜನ ಸಾಮಾನ್ಯರ ಸಲಹೆ ಕೇಳಿದ ಕೇಂದ್ರ

## ಯುಜಿಸಿ ಬದಲು ಉನ್ನತ ಶಿಕ್ಷಣ ಆಯೋಗ ರಚನೆ

ಹೊಸದಿಲ್ಲಿ, ಜೂ. 27

ಯೋಜನಾ ಆಯೋಗ ರದ್ದುಗೊಳಿಸಿ ನೀತಿ ಆಯೋಗ ರಚಿಸಿರುವ ಕೇಂದ್ರ ಸರ್ಕಾರ ಈಗ ವಿಶ್ವವಿದ್ಯಾಲಯ ಧನ ಸಹಾಯ ಆಯೋಗ (ಯುಜಿಸಿ)ವನ್ನು ರದ್ದುಗೊಳಿಸಿ ಉನ್ನತ ಶಿಕ್ಷಣ ಆಯೋಗ ರಚಿಸಲು ಮುಂದಾಗಿದೆ. ಈ ಸಂಬಂಧ ಶಿಕ್ಷಣ ತಜ್ಞರು ಹಾಗೂ ಸಾರ್ವಜನಿಕರು ತಮ್ಮ ಅಭಿಪ್ರಾಯ ಮತ್ತು ಸಲಹೆಗಳನ್ನು ನೀಡುವಂತೆ ಕೋರಿದೆ.

ಭಾರತದಲ್ಲಿ ವಿಶ್ವವಿದ್ಯಾಲಯಗಳ ಸಮನ್ವಯತೆ ಮತ್ತು ಶಿಕ್ಷಣದ ಗುಣಮಟ್ಟ ಸುಧಾರಣೆಗಾಗಿ ಕೇಂದ್ರ ಮಾನವ ಸಂಪನ್ಮೂಲ ಸಚಿವಾಲಯ ಯುಜಿಸಿ ಕಾಯ್ದೆಗೆ ತಿದ್ದುಪಡಿ ತರಲು ಮುಂದಾಗಿದ್ದು, ಉನ್ನತ ಶಿಕ್ಷಣ ಆಯೋಗ ಕಾಯ್ದೆ 2018 ಎಂಬ ಹೊಸ ವಿಧೇಯಕದ ಕರಡು ಪ್ರತಿಯನ್ನು ಸಿದ್ಧಪಡಿಸಿದೆ.

ಉನ್ನತ ಶಿಕ್ಷಣ ಆಯೋಗ ರಚನೆ ಬಗ್ಗೆ ಜುಲೈ 7ರಂದು ಸಂಜೆ 5 ಗಂಟೆಯೊಳಗೆ ನಿಮ್ಮ ಸಲಹೆ ಮತ್ತು ಸೂಚನೆಗಳನ್ನು ತಿಳಿಸುವಂತೆ ಕೇಂದ್ರ ಮಾನವ ಸಂಪನ್ಮೂಲ ಸಚಿವ ಪ್ರಕಾಶ್ ಜಾವಡೇಕರ್ ಮನವಿ ಮಾಡಿದ್ದಾರೆ.

ಇದೇ ಮೊದಲ ಬಾರಿಗೆ ಉನ್ನತ ಶಿಕ್ಷಣ ಆಯೋಗಕ್ಕೆ, ಶಿಕ್ಷಣದ ಗುಣಮಟ್ಟದ ಮಾನಂಡಗಳನ್ನು ಜಾರಿಗೊಳಿಸುವ ಮತ್ತು ಗುಣಮಟ್ಟ ಕಾಯ್ದುಕೊಳ್ಳದ ಹಾಗೂ ನಕಲಿ ಸಂಸ್ಥೆಗಳನ್ನು ಬಂದ್ ಮಾಡುವ ಅಧಿಕಾರ ನೀಡಲಾಗಿದೆ.


ಸಂಸತ್ ಮುಂಗಾರು ಅಧಿವೇಶನದಲ್ಲಿ ಈ ವಿಧೇಯಕ ಮಂಡನೆಯಾಗುವ ಸಾಧ್ಯತೆ ಇದೆ.

ಯೋಜನಾ ಆಯೋ ಗದಂತೆ ಯುಜಿಸಿ ಸಹ ದೇಶದ ಮೊದಲ ಪ್ರಧಾನಿ ಜವಾಹರ ಲಾಲ್ ನೆಹರೂ ಅವರ ಅವಧಿಯಲ್ಲೇ ಸ್ಥಾಪನೆಯಾಗಿದ್ದು, ಈ ಸಂಸ್ಥೆಗೂ ಸರ್ಕಾರ ತಿಲಾಂಜಲಿ ನೀಡದರೆ ಮೋದಿ ಸರ್ಕಾರ ರದ್ದು ಮಾಡುತ್ತಿರುವ ನೆಹರೂ ಅವಧಿಯಲ್ಲಿ ಸ್ಥಾಪಿಸಿದ ಎರಡನೇ ಸಂಸ್ಥೆ ಇದಾಗಲಿದೆ.

DH
DECCAN HERALD
Mangaluru, Thursday June 28, 2018
Pages 20 Vol 21 No 178 ₹ 6.00 M www.deccanherald.com

CENTRAL LIBRARY





# UGC to make way for Higher Education Commission

## Body will have powers to close substandard institutions

**NEW DELHI, DHNS: The Centre has moved in to replace the University Grants Commission (UGC) with a new regulatory body which would have powers to "enforce" compliance with its regulatory provisions and order closure of "substandard and bogus" institutions.**

Non-compliance with the directives or regulations of the proposed Higher Education Commission of India (HECI) by any university or college would result in slapping of fine.

On failure to deposit the fine, heads and members of the management of such institutions would be liable for prosecution under the Code of Criminal Procedure (CrPC), which may lead to a maximum three years imprisonment.

The Human Resource Development (HRD) Ministry has come up with a draft bill to repeal the UGC Act 1956 and establish the HECI. The move is aimed at improving the academic standards in the country's higher education sector.

The HECI (Repeal of University Grants Commission Act, 1956) Bill, 2018 will be applicable to all universities, set up under a law by Parliament or State legislature, and the institutions which have been granted deemed-to-be-university status.

An Overseas Citizen of India (OCI) having requisite qualifications can be appointed as the chairman of the proposed HECI, apart from any other eligible Indian citizen, according to the draft bill.

The central government will appoint the HECI chairman, vice chairman and 12 other members.

The Cabinet Secretary will head the search-cum-selection committee for recommending a panel of names for the post of HECI chairman. The same committee will also recommend a panel of names for the appointment of the vice chairman. This committee will have HECI chairperson as its member.

Human Resource Development minister Prakash Javadekar on Wednesday invited comments and suggestions from all educationists and other stakeholders on the draft bill, by July 7, 2018, 5 pm.

Secretaries of the HRD ministry's higher education department, Skill Development and Entrepreneurship ministry and Department of Science and Technology will be the members of the HECI, representing the central government.


The chairmen of All India Council for Technical Education and national Council for Teacher Education will also be members. Two members of the HECI will be the heads of accreditation bodies.

The 14-member HECI will also have two serving vice chancellors of reputed universities, two serving professors and "one doyen of Industry" as its members.

DH
DECCAN HERALD
Mangaluru, Thursday June 28, 2018
Pages 20 Vol 21 No 178 ₹ 6.00 M www.deccanherald.com

CENTRAL LIBRARY





# Now, VTU looks east, to mentor varsities in naxal-hit areas

**BENGALURU: Scouting for technical talent to build a resourceful talent pool, the Visvesvaraya Technological University (VTU) has gone as far as into eastern India and tapped into the 'red corridor'. The VTU has been recognised as mentor university for various new technological universities across naxal-infested states.**



Chosen by the Centre as part of the Technical Education Quality Improvement Programme (TEQIP)-III, VTU, with its acclaimed faculty and well-trained instructors, will mentor budding universities such as Aryabhata Knowledge University in Bihar, Biju Patnaik University in Odisha, Vinobha Bhave University in Jharkhand and Lalith Narayana Mithula University in Bihar.

Under the project, valid for three years, VTU will send its faculty and manpower to train students at these universities and create a robust talent pool for utilisation by various industries.

"Making use of World Bank assistance, research hubs will be set up at these colleges where our faculty members will impart quality training to the local staff and students from remote areas," explained Prof Karisiddappa, vice chancellor of VTU.

The recognition to VTU is seen as a big boost for eastern India, where youngsters - especially from naxal-hit areas - lack access to quality higher education.

"Already, the Kalinga Institute of Industrial Technology has been working in the area. But VTU will add to what KIIT has been doing in the region. In future, if there is opportunity, VTU will look into prospects of collaborating with KIIT to train youngsters there and help build a bigger talent pool," Karisiddappa said.

Learning from its mistakes, especially paper leak, VTU has decided to digitise the question paper drafting process.

"It was discovered that one of the faculty members who was part of drafting the paper was involved in the crime. We will make faculty members key in the questions and not write them. Nothing will be permitted to be carried out. VTU will be ready with 10-15 different sets of question papers. If the one selected is digitised, there will be no scope for leakage," Karisiddappa said.

**DH News Service**